**ದಿನಾಂಕಃ 06-11-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಹೆಚ್ ವಿ ಎಸ್ ವಕೀಲರಿಂದಃ**

ಅಪಘಾತವಾದ ದಿನದಂದು ನಾನು ಚಿಕ್ಕಳ್ ನಿಂದ ಗುರುಪುರಕ್ಕೆ ಬೈಕಿನಲ್ಲಿ ಹೋಗುತ್ತಿದ್ದೇನು. ಸದರಿ ಬೈಕು ನನ್ನದಲ್ಲ. ಅದನ್ನು ಗ್ಯಾರೇಜ್ ನವರ ಕಡೆಯಿಂದ ಊಟಕ್ಕೆ ಹೋಗಬೇಕೇಂದು ತೆಗೆದುಕೊಂಡು ಬಂದಿದ್ದೇನು. ಬೈಕಿಗೆ ಇನ್ಸುರನ್ಸ ಇತ್ತು ಅದರ ಪ್ರತಿಯನ್ನು ಹಾಜರುಪಡಿಸಿಲ್ಲ. ಅಪಘಾತದ ದಿನದಂದು ವಾಹನ ಚಲಾಯಿಸಲು ನನಗೆ ಡಿ ಎಲ್ ಇತ್ತು. ನಾನು ಎರಡನೇ ಪಿಯುಸಿ ವರೆಗೆ ಒದಿರುತ್ತೇನೆ. ನನ್ನ ಜನನ ದಿನಾಂಕ 15.03.1998 ಎಂದರೆ ಸರಿ. ಆ ದಿನ ನಾನು ಅತೀ ವೇಗ ಅಜಾಗರೂಕತೆಯಿಂದ ವಾಹನ ಚಲಾಯಿಸಿಕೊಂಡು ಹೋಗುತ್ತಿದ್ದು ನನ್ನ ತಪ್ಪಿನಿಂದ ಅಪಘಾತ ಮಾಡಿಕೊಂಡು ಬಿದ್ದಿದ್ದು ನನ್ನ ಬೈಕಿಗೆ ಇನ್ಸುರನ್ಸ ಇರದ ಕಾರಣ ಪರಿಹಾರ ಸಿಗುವುದಿಲ್ಲ ಎಂದು ಕಾರು ಸಂಖ್ಯೆ ಕೆ ಎ 14 ಬಿ /7499 ನೇದ್ದರ ವಿರುದ್ಧ ಸುಳ್ಳು ದೂರು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಅಪಘಾತವು ದಿನಾಂಕ 02.08.2023 ರಂದು ಆಗಿದ್ದು ದೂರನ್ನು ಎರಡು ದಿನ ತಡವಾಗಿ ಕೊಟ್ಟಿರುತ್ತೇನೆ ಎಂದರೆ ಸರಿ. ದೂರನ್ನು ಕೊಡಲು ವಿಳಂಭವಾಗಿದ್ದಕ್ಕೆ ಕಾರಣಗಳನ್ನು ತಿಳಿಸಿದ್ದೀರಾ ಎಂದರೆ ತಿಳಿಸಿರುತ್ತೇನೆ. ಅಪಘಾತವಾದ ರಸ್ತೆಯು ರಾಜ್ಯ ಹೆದ್ದಾರಿಯಾಗಿರುತ್ತದೆ. ಅದು ಒಂದೇ ರಸ್ತೆಯಾಗಿರುತ್ತದೆ. ಆ ದಿನದಂದು ನಾನು ವಾಹನವನ್ನು 25 -30 ರ ವೇಗದಲ್ಲಿ ಚಲಾಯಿಸುತ್ತಿದ್ದೇನು. ನಮ್ಮ ಬೈಕಿಗೂ ಹಾಗೂ ಕಾರಿಗೂ ಮುಖಾ ಮುಖಿ ಡಿಕ್ಕಿಯಾಗಿರುತ್ತದೆ ಎಂದರೆ ನಾನು ಆ ದಿನದಂದು ಬೈಕನ್ನು ಚಲಾಯಿಸಿಕೊಂಡು ನಿಧಾನವಾಗಿ ಹೋಗುತ್ತಿದ್ದೇನು ಆಗ ಎದುರುಗಡೆಯಿಂದ ಬಂದ ಕಾರು ಓವರ್ ಟೇಕ್ ಮಾಡಿ ಬಂದಿದ್ದು ಕಾರಿನ ಚಾಲಕನು ನನಗೆ ಹೊಡೆಯುತ್ತಾನೆ ಎಂದು ಭಯಪಟ್ಟು ಬ್ರೇಕು ಹಾಕಿ ಕೆಳಗೆ ಬಿದ್ದೇನು. ಆಗ ಕಾರು ಬಂದು ನನಗೆ ಡಿಕ್ಕಿಪಡಿಸಿತ್ತು. ನನಗೆ ಆದ ಗಾಯಗಳು ಕಾರು ಚಾಲಕನು ಹೊಡೆದ ಗಾಯಗಳು ಅಲ್ಲ ನಾನೇ ಸ್ವತಃ ಬಿದ್ದು ಆದ ಗಾಯಗಳಾಗಿರುತ್ತವೆ ಎಂದರೆ ಸರಿಯಲ್ಲ. ಆ ಕಾರಣ 2 ನೇಎದುರುದಾರರು ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

ನಾನು ಬಿದ್ದಿದ್ದರಿಂದ ತೆರಚಿದ ಗಾಯಗಳು ಆಗಿರುತ್ತವೆ ಅವು ಸಾದಾ ಸ್ವರೂಪದ ಗಾಯಗಳಾಗಿರುತ್ತವೆ ಅವು ಮೂಳೆ ಮುರಿತದ ಗಾಯಗಳು ಎಂದರೆ ಸರಿಯಲ್ಲ. ನಾನು ಅಪಘಾತವಾದ ನಂತರ ಶಿವಮೊಗ್ಗದ ಸುಬ್ಬಯ್ಯ ಆಸ್ಪತ್ರೆಯಲ್ಲಿ ಒಂದು ದಿನ ಇದ್ದು ಚಿಕಿತ್ಸೆ ಪಡೆದಿರುತ್ತೇನೆ. ಯಾವ ವೈದ್ಯರು ನನಗೆ ಚಿಕಿತ್ಸೆ ಕೊಟ್ಟರು ಎಂದರೆ ನನಗೆ ಗೊತ್ತಿಲ್ಲ. ನಂತರ ನಾನು ಸಂಜಿವಿನಿ ಆಸ್ಪತ್ರೆಯಲ್ಲಿ ಚಿಕಿತ್ಸೆಪಡೆದಿರುತ್ತೇನೆ. ಕೆ ಎಮ್ ಸಿ ಆಸ್ಪತ್ರೆಯಲ್ಲಿ ನನಗೆ ಡಾ. ಆತ್ಮಾನಂದ

ಹೆಗಡೆ ಯವರು ಶಸ್ತ್ರ ಚಿಕಿತ್ಸೆ ಮಾಡಿರುತ್ತಾರೆ. ನನಗೆ ಆಪರೇಷನ್ ಮಾಡಿಲ್ಲ ಕೇವಲ ಇಂಜಕ್ಷನ್ ಕೊಟ್ಟು ಕಳುಹಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವೈದ್ಯರನ್ನು ಕರೆಯಿಸಿ ಸಾಕ್ಷಿ ವಿಚಾರಣೆ ಮಾಡಲು ತೊಂದರೆ ಇರುವುದಿಲ್ಲ ಎಂದರೆ ತೊಂದರೆ ಇಲ್ಲ ಎಂದು ನುಡಿಯುತ್ತಾರೆ. ನಾನು ಸಂಪೂರ್ಣ ಗುಣಮುಖನಾಗಿರುವುದಿಲ್ಲ. ಚಿಕಿತ್ಸೆಗೆಂದು ಎರಡು ಲಕ್ಷ ರೂ. ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯಲು ಮೆಡಿಕಲ್ ಬಿಲ್ಲುಗಳನ್ನು ಸೃಷ್ಠಿ ಮಾಡಿಕೊಂಡು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ವೀರಭದ್ರೇಶ್ವರ ಸರ್ವಿಸ್ ಸ್ಟೇಷನ್ ಚಿಕಳ್ ನಲ್ಲಿ ಕಾರು ವಾಶಿಂಗ್ ಕೆಲಸ ಮಾಡುತ್ತೇನೆ. ಆ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ. ಸದರಿ ಕೆಲಸದಿಂದ ನಾನು ತಿಂಗಳಿಗೆ 25,000/- ದುಡಿಯುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಬಗ್ಗೆ ಯಾವುದಾದರೂ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ. ಸದರಿ ಬೈಕಿನ ಎಮಿಷನ್ ಟೆಸ್ಟ ಮಾಡಿಸಿದ್ದಿರೋ ಅಥವಾ ಕಂಡಿಷನ್ ಇತ್ತು ಇಲ್ಲವೋ ಎಂದು ಪರೀಕ್ಷೆ ಮಾಡಿ ನೋಡಿರುವುದಿಲ್ಲ. ವಾಯು ಮಾಲಿನ್ಯ ತಪಾಸಣೆ ಮಾಡಿಲ್ಲ ಎಂದು ಅದರ ಬಗ್ಗೆ ಪೋಲಿಸರು ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆ ದಿನದಂದು ನನ್ನ ಬೈಕು ಸುಸ್ಥಿತಿಯಲ್ಲಿರಲಿಲ್ಲ ಆ ಕಾರಣ ಅಪಘಾತ ನನ್ನ ತಪ್ಪಿನಿಂದ ಆಗಿದ್ದು 2 ನೇ ಎದುರುದಾರರು ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ಎಸ್ ಎಸ್ ಆಸ್ಪತ್ರೆ ದಾವಣಗೆರೆಗೆ ಕೇವಲ ನಾನು ಅಂಗನ್ಯೂನತೆ ಪ್ರಮಾಣ ಪತ್ರ ತೆಗೆದುಕೊಂಡು ಬರಲು ಹೋಗಿದ್ದೆ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ. ನನಗೆ ಶೇ 40 ರಷ್ಟು ಅಂಗನ್ಯೂನತೆ ಉಂಟಾಗಿಲ್ಲ ಸುಳ್ಳು ಅಂಗನ್ಯೂನತೆ ಪ್ರಮಾಣ ಪತ್ರವನ್ನು ಸೃಷ್ಠಿ ಮಾಡಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯುವ ಸಲುವಾಗಿ ಎಲ್ಲಾ ದಾಖಲೆಗಳನ್ನು ಸೃಷ್ಠಿ ಮಾಡಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಸಹಿ/-

(ಶ್ರೀಮತಿ ಹುಲ್ಲೂರ ಹೇಮಲತಾ ಬಸಪ್ಪ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.